ನೋಡ್ತಿನಿ, ನಾನೇನು ಕೈಗೆ ಬಳೆ ತೊಟಗಿಂಡಲ್ಲ ಅಂತ ತನ್ನ ಗಂಡುಸ್ತನದ ಕೋಟೆಯನ್ನು ಮುತ್ತಿಗೆ ಹಾಕಿದ. ಹೊತ್ತಾಗಿತ್ತು ಅವಾಗಲೇ ಮಾಯಿಕ್ಕಿ, ಭೋಗಕ್ಕ ನಿದ್ದಿ ಹೋಗಿದ್ದರು. ಮೊನ್ನೆ ನೋಡಿದ, 'ಎ' ಸಿನಿಮಾವನ್ನ ನೆನಪಿಗೆ ತಂದುಕೊಂಡು ಕಂದೀಲು ಬೆಳಕಿಗೆ ಸೆರಗು ಜಾರಿದ್ದ ಹೆಂಡತಿ ಮೈಯನ್ನು ನೋಡಿ ಜೊಲ್ಲು ಸುರಿಸಿದ. ಇವಳಿಗೆ ಬಣ್ಣಬಣ್ಣದ ಮಾತಾಡಿಸಿ ಬಲಿಗೆ ಹಾಕಿಕೊಳ್ಳಲಾ? ಅಂತ ಒಂದು ಕ್ಷಣ ಯೋಚನೆ ಮಾಡಿ ಬ್ಯಾಡ ಬ್ಯಾಡ ಹಂಗಮಾಡಿದರ ನಮ್ಮ ವಂಶಕ್ಕ ಅವಮಾನ ಅಂತ ತಿಳದು ಆ ಯೋಚನೆ ಕೈಬಿಟ್ಟ. ವಯಸ್ಸು ಇಟಗೊಂಡು ಸುಖ ಇಲ್ಲದಂಗ ಬದುಕೋದು ಇದಕ್ಕೇನು ಬದುಕಂತಾರೇನು ಸಾಯೋದು ಮೇಲು ಅಂತ ಇನ್ನೊಂದು ರೀತಿಯ ಯೋಚನೆ ಮಾಡಿದ. ಆ ಸಿನ್ಮದಾಗ ಸ್ವಲ್ಪ ಮುಟ್ಟಿದರ ಸಾಕು ಯಳಕಂಡಬಿಡತಾರ. ಇವಳನ್ನು ಸ್ವಲ್ಪ ಮುಟ್ಟಿದರ ಕಪ್ಪೆ ಹಲ್ಲಿ ಮೈಮೇಲೆಬಿದ್ದೋರು ಮಾಡಿದಂಗ ಮಾಡಿಬಿಡತಾಳ. ಇವತ್ತೊಂದು ಕೊನೆಸಲ ನೋಡಿಬಿಡಾಮ ಅಂತ ಹೊಟ್ಟೆಮೇಲೆ ಕೈಯಿಟ್ಟ. ಇವನು ಇದೇ ಕೀಟಗತನ ಮಾಡತನಂತ ಮೊದ್ಲ ಗೊತ್ತಿತನು ಅನ್ನುವಂಗ, 'ನೀನು ಹೀಂಗ ಇದ್ದೆಂತ ಗೊತ್ತಲೋ, ನಾನು ನಿದ್ದೆ ಬಂದಿಲ್ಲಂದರೂ ಸುಮ್ಮನೆ ಕಣ್ಣುಮುಚ್ಚಿ ಮಕ್ಕಂಡಿದ್ದೆ, ಸಾವಿಂದ ಒಟ್ಟ ಭಯಿಲ್ಲ ನಿನಗಾ?' ಅಂತ ಕೇಳಿದಳು. 'ನಂದು ಪತ್ತೇವು ಮುಗದೈತಿ ನೀನ ಕರಕಂತಿಯಾ ಇಲ್ಲ' ಅಂತ ಕಾವೇರಿದ ಮೈಯಿಂದ ಬಹಳ ವೇಗವಾಗಿ ಮಾತಾಡಿದ. 'ಹಂಗಂತ ಡಾಕಿಟ್ರು ಹೇಳಲಿ ನೋಡಾಮ' ಅಂದಳು. 'ದಿನದಿನಾ ನನ್ನ ಕಾಡಸಬ್ಯಾಡ ಏನಂಬದು ಇವತ್ತು ತೀರ್ಮಾನ ಆಗಲಿ ನೀನು ಬಗಲಾಗ ಕರಕಂತಿಯಾ ಇಲ್ಲೇಳು?' ಅಂದ. 'ಕರಂಕಬಲ್ಲ ನೋಡಲೋ ಕರಕಳಂಗಿಲ್ಲಂದ್ರ ಏನಮಾಡಂಗ ಇದ್ದಿ? ಕಾಮಾರಧೀರಮ್ಮ ಸಣಮ್ಮನ ಎಬ್ಬಿಸಲೇನು? ನೋಡು ನಿನ್ನ ಫಜೀತಿ ಆಮೇಲೆ ಏನಾಗುತ್ತ ಅಂತ ದೇವರಿಗೆ ಗೊತ್ತು ನೋಡು' ಅಂದು ಅವಳೆಪ್ಪಗ ಬೆನ್ನು ಮಾಡಿ ಮಲಗಿದಳು. ಮನಸ್ಸಿಗೆ ಬಾಳ ತಾಪ ಮಾಡಿಕೊಂಡ ಅವಳೆಪ್ಪ, 'ನಾನೇನು ಮಾಡತೀನಿ ಅಂತ ಹೇಳಲಾ?' ಅಂದ. 'ಜಲ್ದಿ ಬೊಗಳು' ಅಂದಾಗ 'ನಾನು ಸಾಯ್ತಿನಿ ನೋಡು!!' ಅಂದ.

'ಅಯ್ಯಯ್ಯ ಅಗಣದಾತ ಅಗಣ ಮಾಡಬ್ಯಾಡ ಸಾಯೋರೇನು ಹೇಳಿ ಸಾಯ್ತರೇನು. ಸುಮ್ಮನೆ ಮಕ್ಕ ಮಾನಗೇಡಿ' ಅಂದು ತನ್ನ ಮೈಮೇಲೆ ರಗ್ಗು ಎಳೆದು ಮಲಗಿದಳು. ಅವಳ್ಯಾ ಸಿಟ್ಟಗೇರಿ, 'ನೋಡಲೇ ಇವತ್ತು ಕೊನೆ ನೊಡಲೇ, ನಾನು ಸತ್ತರ ನೀನಲೇ ಬೆಳ್ಳಗಾಗದು ನೋಡು, ಮಾತಿಗಿ ತಕ್ಕಂಗ ನಡಕೊಂಡ ವಂಶ ನಮ್ಮದಲೇ' ಅಂತ ಗುಣ್ಣೇದಾಗ ಇದ್ದ ಈಳಿಗಿ ತಗಂಡು ಹಾಸಿಗೆ ಮೇಲೆ ಬಿದ್ದಿದ ದೋತರ ಯಂಗಬೇಕಲೆ ಉಟುಗೊಂಡು ಊರು ಹೊರಗ ಹೋಗಿ ಸಾಯಬೇಕಂತ ಹೊಂಟ. ಅವಳೆಪ್ಪನ ನೋಡಿದ ನಾಯಿಗುಳು ಗಟ್ಟಿಗೆ ಬೊಗಳಾಕತ್ತಿದ್ದಕ್ಕ ವರಸಿನ ಮೇಲೆ ಮಕ್ಕಂಡಿದ ಮರಕಲದಿನ್ನಿ ಮಲ್ಲಯ್ಯ ಎಚ್ಚರಾಗಿ ಒಂದು ಬೆರೆ ಕೆಮ್ಮಿ,'ಇಷ್ಟೊತ್ತಿನ್ಯಾಗ ಎಲ್ಲಿಗಿ ಅವಳೆ ಕೈಯಾಗ ಬೆರೆ ಈಳಿಗಿ ಹಿಡಕಂಡಿದ್ದಿ' ಅಂದ. 'ಇಲ್ಲ ಮಾವ ಸಾಕಾಗಿಬಿಟ್ಟೈತಿ. ಅವಳು ಬಗಲಾಗ ಕರಕವಳ್ಳಲು ಆರು ತಿಂಗಳಾತಿ ಏನು ಮಾಡಲಿ?' ಅಂದು ಅಳಾಕ ಸುರುಮಾಡಿದ. 'ಅಲೇ ಇವನಾ ಈಳಿಗಿ ಯಾಕ ಹಿಡಕಂಡಿದ್ದಿ?' ಅಂದು ಗದರಿಸಿ ಕೇಳಿದಾಗ, 'ಜಲ್ಮ ಸಾಕಾಗೈತಿ ಮಾವ ಸುಮ್ಮನೆ ಏನು ಉಪಯೋಗಂತ ಈಳಿಗಿಲೇ ನನ್ನ ತುಣ್ಣಿ ಕೊಯ್ಕಂಡು ಬಿಡತೀನಿ' ಅಂದು ಮುಂದ ಒಂದು ಹೆಜ್ಜೆ ಇಡಬೇಕನದ್ರಾಗ ಮಲ್ಲಯ್ಯ ವರಸಿನಿಂದ ದಿಗ್ಗನೆ ಮೇಲೆದ್ದು ಅವಳೆಪ್ಪನ ಕೈಯಾಗಿನ ಈಳಿಗಿ ಕೊಸ್ಗೊಂಡು, 'ನಿಮ್ಮವ್ವನ ಬದ್ಮಾಶ್ ಸೂಳೆಮಗನೆ, ಇರದೊಂದು ಕೊಯ್ಕೊಂಡು ಉಚ್ಚೆನೇನು ಬಾಯಿಲಿ ಹೊಯ್ತಿಯೆನಲೇ? ನಿಮ್ಮಮ್ಮನ, ಇದೇನು ವಯಸ್ಸೇನು ಹಂಗ ಇರತ್ತನು ಇನಾವಂದು ಹತ್ತು ವರ್ಸಾದರ ಆಯ್ತೆಪ್ಪ, ಮಕ್ಕಳ ಮಕ ನೋಡಿ ಬದುಕಬೇಕಪ್ಪ ನೋಡಿವಿ. ಎಲ್ಲನ್ನಾ ಹುಡುಗಾಟಿಗೆ ಮಾಡಿಕ್ಯಾಂತ ಕೊಯ್ಕಂಡು ಇಡೀ ಊರಿಗೆ ಊರು ನಗಂಗ ಮಾಡಿಯೆಲೇ, ನಡಿ ಮನಿಗಿ ನಡಿ ಬಾಳ ಶ್ಯಾಣೆದ್ದಿ' ಅಂತ ಬಹಳ ಬಿರುಸಿಲೇ ಜಾಡಿಸಿದಾಗ ಮಲ್ಲಯ್ಯ ಮಾವ ಹೇಳಿದ್ದು ಸರಿ ಅಂತ ತಿಳದು ತಿರುಗಿ ಮನಿಗಿ ಹೋಗಿ ಗುಣ್ಣೇವದಾಗ ಈಳಿಗಿ ಇಟ್ಟು ಮತ್ತೆ ಹೇಣ್ತಿ ಬೆನ್ನಿಗೆ ಬೆನ್ನು ಕೊಟ್ಟು ಮಲಗಿದ. ಆಕಡೆ ಮಾರೆಮ್ಮ ಗುಸುಗುಸು ನಕ್ಕೋಂತ ಸುಖನಿದ್ರೆಗೆ ಜಾರಿದಳು.

●